## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ:– 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಯನ್ನು ನಡೆಸುವ ಕುರಿತು

ಓದಲಾಗಿದೆ:–
1. ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರುರವರ ಏಕ ಕಡತ ಸಂಖ್ಯೆ: ಸಂಖ್ಯೆ:ಎ8/ ಎಸ್‌ಎಸ್‌ಎಲ್‌ಸಿ/ ಪ.ಪದ್ದತಿ–2022/37/2021–22
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಸಿ4(6)ಸಪ್ರೌಶಾ/ಶಾ.ಕಾ.ಪ್ರ/23/20–21 ದಿನಾಂಕ:16.08.2021.
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಡಿಎಸ್‌ಇಆರ್‌ಟಿ/ಇವಿಜಿ/1–10/ಮೌಲ್ಯಾಂಕನ/2021–22 ದಿನಾಂಕ: 11.08.2021.
4. ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:28.01.2019.
5. ಸರ್ಕಾರದ ಆದೇಶ ಸಂಖ್ಯೆ:ಇಪಿ 189 ಎಸ್‌ಎಲ್‌ಬಿ 2021, ದಿನಾಂಕ: 30–11–2021.
6. ಸರ್ಕಾರದ ಆದೇಶ ಸಂಖ್ಯೆ : ಇಪಿ 197 ಎಸ್‌ಎಲ್‌ಬಿ 2021, ದಿನಾಂಕ; 04–12–2021.

* * * * *

**ಪ್ರಸ್ತಾವನೆ :–**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರ ಏಕ ಕಡತ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಪ.ಪದ್ದತಿ–2022/37/2021–22ರಲ್ಲಿ ವಿವರಿಸಿರುವಂತೆ ಕ್ರಮಾಂಕ (2)ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಸುತ್ತೋಲೆ ದಿನಾಂಕ: 16.08.2021ರನ್ವಯ 2021–22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳ 10ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಭೌತಿಕವಾಗಿ ದಿನಾಂಕ:23.08.2021ರಿಂದ ಪ್ರಾರಂಭಿಸಲಾಗಿರುತ್ತದೆ. ಇದಕ್ಕೂ ಮೊದಲು ಅಂದರೆ, ದಿನಾಂಕ:01.07.2021 ರಿಂದ ಆನ್‌ಲೈನ್ ವಿಧಾನಗಳ ಮೂಲಕವೂ ತರಗತಿಗಳನ್ನು ನಡೆಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಶಾಲೆಗಳು ಎಂದಿನಂತೆ ಭೌತಿಕವಾಗಿ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿರುವುದರಿಂದ 2021–22ನೇ ಸಾಲಿಗೆ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷಾ ಪದ್ದತಿ, ಪ್ರಶ್ನೆಪತ್ರಿಕೆ ವಿನ್ಯಾಸ ಮತ್ತು ಪೂರ್ವ ಸಿದ್ದತಾ ಪರೀಕ್ಷೆ ವಿಧಾನ, ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕೃತಿ ಹಾಗೂ ಪರೀಕ್ಷಾ ಖರ್ಚುವೆಚ್ಚಗಳ ಕುರಿತು ತೆಗೆದುಕೊಳ್ಳಬಹುದಾದ ಕ್ರಮದ ಕುರಿತು ನಿರ್ದೇಶಕರು(ಪರೀಕ್ಷೆಗಳು), ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ರವರು ಈ ಕೆಳಕಂಡಂತೆ ವಿವರಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ:

## 1. ಮುಖ್ಯ ಪರೀಕ್ಷಾ ಪದ್ಧತಿ ಮತ್ತು ಪ್ರಶ್ನೆಪತ್ರಿಕೆ ವಿನ್ಯಾಸ :-

- 2021–22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಶಾಲೆಗಳು ಭೌತಿಕವಾಗಿ 2 ರಿಂದ 3 ತಿಂಗಳು ವಿಳಂಬವಾಗಿ ಪ್ರಾರಂಭವಾಗಿರುವುದರಿಂದ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೇ.20 ರಷ್ಟು ಪಠ್ಯವಸ್ತುವನ್ನು ಸರ್ಕಾರದ ಆದೇಶ ಸಂಖ್ಯೆ : ಇಪಿ 197 ಎಸ್‌ಎಲ್‌ಬಿ 2021, ದಿನಾಂಕ; 04–12–2021ರನ್ವಯ ಕಡಿತಗೊಳಿಸಲಾಗಿರುತ್ತದೆ.
- 2019–20ನೇ ಸಾಲಿನಲ್ಲಿದ್ದಂತೆ ಪ್ರಶ್ನೆಪತ್ರಿಕೆಯ ಮಾದರಿಯಲ್ಲಿ ಬದಲಾವಣೆಯನ್ನು ಮಾಡದೆ, ಪ್ರಶ್ನೆಪತ್ರಿಕೆಯ ಕಠಿಣತೆಯ ಮಟ್ಟವನ್ನು ಈ ಕೆಳಕಂಡಂತೆ ಕಡಿಮೆ ಮಾಡಬಹುದಾಗಿರುತ್ತದೆ.
  - **ಸುಲಭ ಪ್ರಶ್ನೆಗಳು – 40%**
  - **ಸಾಧಾರಣ ಪ್ರಶ್ನೆಗಳು – 50%**
  - **ಕಠಿಣ ಪ್ರಶ್ನೆಗಳು – 10%**
- 2019–20ನೇ ಸಾಲಿನಲ್ಲಿದ್ದಂತೆ ಪ್ರಥಮ ಭಾಷೆಗೆ ಗರಿಷ್ಠ 100 ಅಂಕಗಳಿಗೆ ಹಾಗೂ ಉಳಿದ 05 ವಿಷಯಗಳಿಗೆ ಗರಿಷ್ಠ 80 ಅಂಕಗಳಿಗೆ, 3.00 ಗಂಟೆಯ ಕಾಲಾವಕಾಶ ನೀಡಿ ಸರಳ ಹಾಗೂ ಸುಲಭವಾಗಿ ಉತ್ತರಿಸಲು ಅವಕಾಶ ನೀಡಬಹುದಾಗಿದೆ. ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿವರಣಾತ್ಮಕ ಉತ್ತರ ಬರೆಯುವ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ : ಇಪಿ 189 ಎಸ್‌ಎಲ್‌ಬಿ 2021, ದಿನಾಂಕ: 30–11–2021ರನ್ವಯ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಲಾಗಿದೆ.

## 2. ಪೂರ್ವ ಸಿದ್ಧತಾ ಪರೀಕ್ಷೆ ನಡೆಸುವ ವಿಧಾನ :-

10ನೇ ತರಗತಿಗೆ ಪೂರ್ವ ಸಿದ್ದತಾ ಪರೀಕ್ಷೆಯು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಎಸ್‌ಎಸ್‌ಎಲ್‌ಸಿ ಅಂತಿಮ ಪರೀಕ್ಷೆಗೆ ಸಂಬಂಧಿಸಿದ ದಿಕ್ಸೂಚಿಯಾಗಿರುತ್ತದೆ. ಅದರಂತೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ 2019–20ನೇ ಸಾಲಿನಲ್ಲಿ ಶಾಲಾ ಹಂತದಲ್ಲಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಆದರೆ, ಕಳೆದ 2020–21ನೇ ಸಾಲಿನಲ್ಲಿ ಕೋವಿಡ್–19ರ ಎರಡನೇ ಅಲೆಯು ರಾಜ್ಯಾದ್ಯಂತ ವ್ಯಾಪಿಸಿದ್ದ ಹಿನ್ನೆಲೆಯಲ್ಲಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ನಡೆಸಲಾಗಿರುವುದಿಲ್ಲ.

ಪ್ರಸ್ತುತ ವರ್ಷದಲ್ಲಿ ಶಾಲೆಗಳಲ್ಲಿ 10ನೇ ತರಗತಿಯು ಎಂದಿನಂತೆ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ಮುಖ್ಯ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ದಪಡಿಸುವ ಮಾದರಿಯಂತೆಯೇ ಸಿದ್ದಪಡಿಸಿ, ವೇಳಾ ಪಟ್ಟಿಯನ್ನು ಪ್ರಕಟಿಸಿ, ಪ್ರಶ್ನೆ ಪತ್ರಿಕೆಗಳನ್ನು ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಶಾಲೆಗಳಿಗೆ ರವಾನಿಸಿ ಶಾಲಾ ಹಂತದಲ್ಲಿಯೇ ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಕೈಗೊಳ್ಳಬಹುದಾಗಿದೆ. ಈ ಪರೀಕ್ಷೆಯನ್ನು ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆ ನಡೆಯುವ ಒಂದು ತಿಂಗಳ ಮುಂಚಿತವಾಗಿ ಅಂದರೆ, 2022ರ ಫೆಬ್ರವರಿ

ಮೊದಲನೇ ವಾರದಲ್ಲಿ ರಾಜ್ಯವ್ಯಾಪಿ ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಡೆಸಬಹುದಾಗಿರುತ್ತದೆ. ಸದರಿ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಶಾಲಾ ಹಂತದಲ್ಲಿಯೇ ಕೈಗೊಳ್ಳಬಹುದು.

**3. ಪೂರ್ವ ಸಿದ್ದತಾ ಪರೀಕ್ಷೆಯ ಪ್ರಶ್ನೆಪತ್ರಿಕೆ ಮುದ್ರಣ, ಸರಬರಾಜು ಮತ್ತು ಖರ್ಚುವೆಚ್ಚಗಳ ಅಂದಾಜು ಆಯವ್ಯಯ ಕೆಳಕಂಡಂತಿರುತ್ತದೆ.**

ಪೂರ್ವ ಸಿದ್ದತಾ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಉಪನಿರ್ದೇಶಕರು (ಆಡಳಿತ)ರವರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಶಕ್ಕೆ ನೀಡಿ, ಅವರುಗಳು ತಾಲ್ಲೂಕು ಕೇಂದ್ರಸ್ಥಾನದ ಸ್ಟ್ರಾಂಗ್ ರೂಂನಲ್ಲಿ ಸೂಕ್ತ ಭದ್ರತೆಯೊಂದಿಗೆ ಸುರಕ್ಷಿತವಾಗಿ ಸಂರಕ್ಷಿಸಿಟ್ಟುಕೊಂಡು ವೇಳಾ ಪಟ್ಟಿಯಂತೆ ಅಯಾ ದಿನದ ಪ್ರಶ್ನೆಪತ್ರಿಕೆಯನ್ನು 8 ರಿಂದ 10 ಶಾಲೆಗಳಿಗೆ ಒಂದು ರೂಟ್ ನಂತೆ ರೂಟ್ ಮ್ಯಾಪ್ ಸಿದ್ದಪಡಿಸಿಕೊಂಡು ಸೂಕ್ತ ಭದ್ರತೆಯೊಂದಿಗೆ ಪ್ರಶ್ನೆಪತ್ರಿಕೆಗಳನ್ನು ಸಂಬಂಧಿಸಿದ ಶಾಲೆಗಳಿಗೆ ರವಾನಿಸಲು ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸಬೇಕಾಗಿರುತ್ತದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾಗುವ ಪೂರ್ವ ಸಿದ್ದತಾ ಪರೀಕ್ಷಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಖರ್ಚು ವೆಚ್ಚಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿಷಯ | ಭೌತಿಕ | ಆರ್ಥಿಕ ಘಟಕ ವೆಚ್ಚ (ರೂ. ಲಕ್ಷಗಳಲ್ಲಿ) | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 01 | ಪ್ರಶ್ನೆ ಪತ್ರಿಕೆಯ ಮುದ್ರಣ ಹಾಗೂ ಸರಬರಾಜು ಕಾರ್ಯಕ್ಕೆ (ರಾಜ್ಯ ಹಂತದಿಂದ ಜಿಲ್ಲಾ ಹಂತಕ್ಕೆ) ಅಂದಾಜು ವಿದ್ಯಾರ್ಥಿಗಳ ಸಂಖ್ಯೆ 8.00 ಲಕ್ಷ | 8.00 ಲಕ್ಷ | 400.00 | 400.00 |
| 02 | ಪ್ರಶ್ನೆ ಪತ್ರಿಕೆಗಳನ್ನು ಬಿಇಓ ಕಛೇರಿಯಿಂದ ಶಾಲೆಗಳಿಗೆ ರವಾನೆ ವೆಚ್ಚ (15,000 ಶಾಲೆಗಳು, ಪ್ರತಿ ರೂಟ್‌ಗೆ ಅಂದಾಜು 8 ಶಾಲೆಗಳಂತೆ) (15,000/8= ಒಟ್ಟು 1875 ರೂಟ್ * ಒಂದು ರೂಟ್‌ಗೆ ರೂ.1,400/-ರಂತೆ * 6 ದಿನಗಳಿಗೆ) | 1875 | 1875*1400*6 | 158.00 |
| 03 | ಮಾರ್ಗಾಧಿಕಾರಿಗಳ ಸಂಭಾವನೆ (ಪ್ರತಿ ಮಾರ್ಗಕ್ಕೆ ಇಬ್ಬರಂತೆ * ಪ್ರತಿ ಮಾರ್ಗಾಧಿಕಾರಿಗೆ ದಿನಕ್ಕೆ ರೂ.150/-ರಂತೆ * 6 ದಿನಗಳಿಗೆ ) | 1875 | 1875*2*150*6 | 34.00 |
| | **ಒಟ್ಟು =** | | | **592.00** |

- ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:28.11.2019ರನ್ವಯ ಪೂರ್ವ ಸಿದ್ದತಾ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಗೆ ಪರೀಕ್ಷಾ ಶುಲ್ಕವನ್ನು ರೂ.25/- ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ಸಾಗಾಣಿಕೆ ದರವು ಹೆಚ್ಚಿರುವ ಕಾರಣ ಮತ್ತು ಸದರಿ ಪರೀಕ್ಷಾ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಇತರೆ ಕಾರ್ಯಗಳಿಗೆ ಖರ್ಚುವೆಚ್ಚ ಹೆಚ್ಚಾಗಿರುವ ಹಿನ್ನೆಲೆಯಲ್ಲಿ 2021-22ನೇ ಸಾಲಿಗೆ ಪ್ರತಿ ವಿದ್ಯಾರ್ಥಿಗೆ ಪರೀಕ್ಷಾ ಶುಲ್ಕವನ್ನು ರೂ.25/- ರಿಂದ 60/- ಕ್ಕೆ ಹೆಚ್ಚಿಸುವುದು ಸೂಕ್ತವಾಗಿರುತ್ತದೆ.

- ಶುಲ್ಕ ವಿನಾಯಿತಿಯನ್ನು ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಶುಲ್ಕ ಪಾವತಿಸುವ ಸಾಮಾನ್ಯ ವಿದ್ಯಾರ್ಥಿಗಳು ಒಟ್ಟು 1.60 ಲಕ್ಷ ಇದ್ದು, ಈ ವಿದ್ಯಾರ್ಥಿಗಳಿಂದ ರೂ.60/-ರಂತೆ ಪರೀಕ್ಷಾ ಶುಲ್ಕ ಪಡೆದಲ್ಲಿ ಇದರಿಂದ ಅಂದಾಜು ರೂ.96.00 ಲಕ್ಷ ನಿರೀಕ್ಷಿಸಬಹುದಾಗಿದೆ.

- ಶುಲ್ಕ ಪಾವತಿಸುವ ವಿದ್ಯಾರ್ಥಿಗಳಿಂದ ರೂ.96.00 ಲಕ್ಷ ಹಾಗೂ ಇತರೆ ಇಲಾಖೆಗಳಿಂದ ಮರುಭರಣವಾಗುವ ರೂ.372.00 ಲಕ್ಷ ಒಟ್ಟಾರೆ ರೂ.468.00 ಲಕ್ಷಗಳು ಪರೀಕ್ಷಾ ಶುಲ್ಕವಾಗಿ ಪಡೆಯಬಹುದಾಗಿದೆ. ಎಲ್ಲಾ ಪರೀಕ್ಷಾ ಪ್ರಕ್ರಿಯೆಗೆ ಅಂದಾಜಿಸಲಾದ 592.00 ಲಕ್ಷಗಳಲ್ಲಿ ಪರೀಕ್ಷಾ ಶುಲ್ಕವಾಗಿ ಪಡೆಯುವ ರೂ.468.00 ಲಕ್ಷಗಳನ್ನು ಕಳೆದು ರೂ.124.00 ಲಕ್ಷಗಳ ಕೊರತೆ ಉಂಟಾಗುತ್ತದೆ.

- ಪ್ರಸ್ತುತ ಸಾಲಿಗೆ ಸಂಬಂಧಿಸಿದ ಇಲಾಖೆಗಳಿಂದ ಪರೀಕ್ಷೆ ನಡೆಸುವ ಪೂರ್ವದಲ್ಲಿಯೇ ಮರುಭರಣ ಪಡೆಯಲಾಗದ ಪ್ರಯುಕ್ತ ಸದರಿ ರೂ.372.00 ಲಕ್ಷಗಳನ್ನು ಮತ್ತು ಕೊರತೆ ಮೊತ್ತ ರೂ.124.00 ಲಕ್ಷಗಳ ಒಟ್ಟಾರೆ ರೂ.496.00 ಲಕ್ಷಗಳನ್ನು ಮಂಡಳಿಯ ಎಸ್‌ಎಸ್‌ಎಲ್‌ಸಿ ವಿಭಾಗದಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸಬಹುದಾಗಿದೆ.

- ಶುಲ್ಕ ವಿನಾಯಿತಿಯನ್ನು ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಶುಲ್ಕ ಪಾವತಿಸುವ ಸಾಮಾನ್ಯ ವಿದ್ಯಾರ್ಥಿಗಳಿಂದ ಪೂರ್ವ ಸಿದ್ದತಾ ಪರೀಕ್ಷೆಯ ಪರೀಕ್ಷಾ ಶುಲ್ಕ ಹಾಗೂ ಮುಖ್ಯ ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ಒಟ್ಟಿಗೇ ಸ್ವೀಕರಿಸಬಹುದಾಗಿದೆ.

ಮೇಲ್ಕಂಡಂತೆ, 2021-22ನೇ ಸಾಲಿಗೆ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷಾ ಪದ್ಧತಿ, ಪ್ರಶ್ನೆಪತ್ರಿಕೆ ವಿನ್ಯಾಸ ಮತ್ತು 2021-22ನೇ ಸಾಲಿನಿಂದ ಪೂರ್ವ ಸಿದ್ದತಾ ಪರೀಕ್ಷೆ ವಿಧಾನ, ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕೃತಿ ಹಾಗೂ ಪರೀಕ್ಷಾ ಖರ್ಚುವೆಚ್ಚಗಳ ಕುರಿತು ತೆಗೆದುಕೊಳ್ಳಬಹುದಾದ ಕ್ರಮದ ಕುರಿತು ನಿರ್ದೇಶಕರು (ಪರೀಕ್ಷೆಗಳು)ರವರು ಸಲ್ಲಿಸಿರುವ ಕೋರಿಕೆಯನ್ನು ಸರ್ಕಾರವು ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 197 ಎಸ್‌ಎಲ್‌ಬಿ 2021, ಬೆಂಗಳೂರು,**
**ದಿನಾಂಕ: 6ನೇ ಡಿಸೆಂಬರ್ 2021**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ವಿವರಿಸಿರುವ ವಿಧಾನದಂತೆ 2021-22ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ಮುಖ್ಯ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಮಾದರಿಯಂತೆಯೇ ಸಿದ್ಧಪಡಿಸಿ, ವೇಳಾ ಪಟ್ಟಿಯನ್ನು ಪ್ರಕಟಿಸಿ, ಪ್ರಶ್ನೆಪತ್ರಿಕೆಗಳನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲೆಗಳಿಗೆ ರವಾನಿಸಿ ಶಾಲಾ ಹಂತದಲ್ಲಿಯೇ ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸಿ, ಶಾಲಾ ಹಂತದಲ್ಲಿಯೇ ಮೌಲ್ಯಮಾಪನ ಕೈಗೊಳ್ಳಲು ಸೂಚಿಸಿದೆ. ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಖರ್ಚುವೆಚ್ಚಗಳನ್ನು ಮಂಡಳಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸಿ ಪೂರ್ವ ಸಿದ್ದತಾ

ಪರೀಕ್ಷೆಯನ್ನು ನಡೆಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಸೂಚಿಸಿದೆ. ಸದರಿ ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ಪ್ರತಿ ವಿದ್ಯಾರ್ಥಿಗೆ ರೂ.25/– ರಿಂದ ರೂ.60/–ಕ್ಕೆ ಹೆಚ್ಚಿಸಲಾಗಿದೆ.

ಮುಂದುವರೆದು, ಮುಖ್ಯ ಪರೀಕ್ಷೆಯನ್ನೂ ಸಹ 2019–20ನೇ ಸಾಲಿನಲ್ಲಿ ನಡೆಸಿದ ಮಾದರಿಯಂತೆಯೇ ಹಾಗೂ ಪ್ರಸ್ತಾವನೆಯಲ್ಲಿ ವಿವರಿಸಿರುವ ಪರೀಕ್ಷಾ ಪದ್ಧತಿ ಮತ್ತು ಪ್ರಶ್ನೆಪತ್ರಿಕೆ ವಿನ್ಯಾಸದಂತೆ 2021–22ನೇ ಸಾಲಿನಲ್ಲಿ ಪರೀಕ್ಷೆಯನ್ನು ನಡೆಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

6/12
(ಚಂದ್ರಶೇಖರ್)
ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ)
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ರವರಿಗೆ:

1. ಪ್ರಧಾನ ಮಹಾ ಲೇಖಪಾಲರು – ಕರ್ನಾಟಕ (ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
4. ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
6. ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬೆಂಗಳೂರು.
7. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ (ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ)
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ :–

1. ಸರ್ಕಾರದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ರವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.